


ಡಾ. ಆರ್.ಸಿ. ಅಗರ್ವಾಲ್ ಕಿವಿಮಾತು | ಕೆಳದಿ ಶಿವಪ್ಪ ನಾಯಕ ಕೃಷಿ ಹಾಗೂ ತೋಟಗಾರಿಕೆ ವಿವಿ ಘಟಿಕೋತ್ಸವ

# ಕೃಷಿ ಪದವೀಧರರು ಸವಾಲು ಎದುರಿಸುವ ಬದ್ಧತೆ ತೋರಬೇಕು

■ ವಿಜಯವಾಣಿ ಸುದ್ದಿಜಾಲ ಶಿವಮೊಗ್ಗ

ಕೃಷಿ ಪದವೀಧರರು ಕೃಷಿ ಹಾಗೂ ತೋಟಗಾರಿಕೆ ವಲಯದ ಪ್ರಸ್ತುತ ಸವಾಲುಗಳನ್ನು ಎದುರಿಸಲು ಬದ್ಧತೆ ಪ್ರದರ್ಶಿಸಬೇಕು. ತನ್ಮೂಲಕಕೃಷಿಕ್ಷೇತ್ರದಅಭಿವೃದ್ಧಿಯೊಂದಿಗೆದೇಶದಆರ್ಥಿಕತೆಗೆ ಶಕ್ತಿ ತುಂಬಬೇಕು ಎಂದು ಐಸಿಎಆರ್ ಉಪ ಮಹಾನಿರ್ದೇಶಕ ಡಾ. ಆರ್.ಸಿ. ಅಗರ್ವಾಲ್ ಹೇಳಿದ್ದಾರೆ.

» ರಾಜ್ಯಪಾಲ ಗೆಹಲೋತ್ ಉಪಸ್ಥಿತಿ

ಕೆಳದಿ ಶಿವಪ್ಪ ನಾಯಕ ಕೃಷಿ ಹಾಗೂ ತೋಟಗಾರಿಕೆ ವಿವಿಯ 6ನೇ ಘಟಿಕೋತ್ಸವದಲ್ಲಿ ಪ್ರಧಾನ ಭಾಷಣ ಮಾಡಿದರು. ಕೃಷಿ ಜೈವಿಕ ವೈವಿಧ್ಯತೆಯನ್ನು ಕಾಯ್ದುಕೊಳ್ಳುವುದರಿಂದ ಉತ್ಪಾದನೆ ಹೆಚ್ಚಿಸುವ ಮೂಲಕ ಆಹಾರ ಭದ್ರತೆ ಸಾಧಿಸಬಹುದು. ಕೃಷಿ ಯಾಂತ್ರೀಕರಣಕ್ಕೆ ಒತ್ತು ನೀಡುವುದು, ಜೈವಿಕ ತಂತ್ರಜ್ಞಾನಗಳ ಬಳಕೆಗೆ ಆದ್ಯತೆ ನೀಡುವ ಮೂಲಕ ಆಹಾರ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಬಹುದು. ಮುಖ್ಯವಾಗಿ ನೀರಿನ ಸದ್ಬಳಕೆಯಾಗಬೇಕು. ಬಹುಪಾಲು ನೀರು ಸಮುದ್ರ ಸೇರುತ್ತಿರುವುದು ದುರದೃಷ್ಟಕರ. ನಾವು ಈಗಾಗಲೇ ಬಹಳಷ್ಟು ಕೃಷಿ ಜೈವಿಕ ವಿವೈವಿಧ್ಯತೆಯನ್ನು ಕಳೆದುಕೊಂಡಿದ್ದೇವೆ. ಕೃಷಿ ಭೂಮಿಯ ಪ್ರಮಾಣವೂ ಕಡಿಮೆ ಆಗುತ್ತಿರುವುದು ಆತಂಕದ ಸಂಗತಿ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಪದವಿ ಪ್ರದಾನ ಮಾಡಿದರು. ಭಾರತ್ ಬಯೋಟೆಕ್‌ನ ಸಂಸ್ಥಾಪಕ ಡಾ. ಕೃಷ್ಣಮೂರ್ತಿ ಎಲ್ಲಾ, ವಿವಿಯ ಕುಲಪತಿ ಪ್ರೊ. ಎಂ.ಕೆ. ನಾಯ್ಕ್, ಕುಲಸಚಿವ ಡಾ. ಲೋಕೇಶ್, ಡೀನ್‌ಗಳಿದ್ದರು.


ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಹಾಗೂ ಐಸಿಎಆರ್ ಡಿಡಿಜಿ ಡಾ. ಆರ್.ಸಿ. ಅಗರ್ವಾಲ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

## ಶಿಕ್ಷಕ ದಂಪತಿ ಪುತ್ರಿಗೆ ನಾಲ್ಕು ಚಿನ್ನದ ಪದಕ

ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲದ ಶಿಕ್ಷಕ ದಂಪತಿ ನಂಜುಂಡಯ್ಯ ಹಾಗೂ ಮಂಜುಳಾ ದಂಪತಿ ಪುತ್ರಿ ಡಿ. ಸ್ಫೂರ್ತಿ ತೊಟಗಾರಿಕೆಯಲ್ಲಿ ಪದವಿಯೊಂದಿಗೆ ನಾಲ್ಕು ಚಿನ್ನದ ಪದಕ ಪಡೆದು ಬೇರೆಯವರಿಗೂ ಸ್ಫೂರ್ತಿಯಾಗಿದ್ದಾರೆ. ಆರಂಭದಿಂದಲೂ ತೋಟಗಾರಿಕೆ ವಿಜ್ಞಾನದಲ್ಲಿ ಆಸಕ್ತಿಯಿತ್ತು. ಹೀಗಾಗಿ ಸಾಧನೆ ಸಾಧ್ಯವಾಯಿತು. ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆದು ಐಎಎಸ್ ಅಧಿಕಾರಿಯಾಗುವ ಹಂಬಲವಿದೆ ಎಂದು ಸ್ಫೂರ್ತಿ ತಿಳಿಸಿದರು.


ತಾಯಿಯ ಸಿಹಿಮುತ್ತು

## ಕೃಷಿ ಸಂಶೋಧನೆಯೇ ಗುರಿ



ಚಿಕ್ಕಬಳ್ಳಾಪುರ ಜಿಲ್ಲೆ ಪಾಲೇನಹಳ್ಳಿಯ ಅಂಬರೀಷ್ ಕೃಷಿ ಕೀಟಶಾಸ್ತ್ರದಲ್ಲಿ ಪಿಎಚ್.ಡಿ ಪದವಿಯೊಂದಿಗೆ ಘಟಿಕೋತ್ಸವದಲ್ಲಿ ಎರಡು ಚಿನ್ನದ ಪದಕಗಳನ್ನು ಪಡೆದರು. ಪಾಲಕರು ಕೂಲಿ ಕೆಲಸ ಮಾಡಿ ಮಗನ ವ್ಯಾಸಂಗಕ್ಕೆ ಆಸರೆಯಾಗಿ ನಿಂತರು. ಕೃಷಿಯಲ್ಲಿ ಸ್ನಾತಕೋತ್ತರ ಪದವಿ ಪಡೆದ ಬಳಿಕ ಕುಟುಂಬ ನಿರ್ವಹಣೆಗೂ ಒತ್ತು ನೀಡಿದ ಇವರು ಕೃಷಿ ವಿವಿಯಲ್ಲೇ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೃಷಿ ಕ್ಷೇತ್ರದಲ್ಲಿ ತಲೆದೋರುವ ಕೀಟಗಳ ಹಾವಳಿ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಅದಕ್ಕೆ ಪರಿಹಾರವನ್ನು ಕಂಡುಹಿಡಿಯುವ ನಿಟ್ಟಿನಲ್ಲಿ ನನ್ನ ಮುಂದಿನ ಅಧ್ಯಯನ ಸಾಗಲಿದೆ. ಕೃಷಿ ಕ್ಷೇತ್ರಕ್ಕೆ ನನ್ನದೇ ಆದ ಕೊಡುಗೆ ನೀಡುವ ಮಹದಾಸೆಯಿದೆ ಎಂದು ಅಂಬರೀಷ್ ಅನಿಸಿಕೆ ವ್ಯಕ್ತಪಡಿಸಿದರು.

## 238 ಮಂದಿಗೆ ಪದವಿ

ಕೃಷಿ, ತೋಟಗಾರಿಕೆ ಹಾಗೂ ಅರಣ್ಯ ವಿಷಯ ವ್ಯಾಸಂಗ ಮಾಡಿದ 238 ಪದವೀಧರರಿಗೆ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಯಿತು. ಕೃಷಿ, ತೋಟಗಾರಿಕೆ ಅರಣ್ಯ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪೂರೈಸಿದ 105 ವಿದ್ಯಾರ್ಥಿಗಳಿಗೆ, 15 ಸಂಶೋಧಕರಿಗೆ ಪಿಎಚ್‌ಡಿ, ರ್‍ಯಾಂಕ್ ಗಳಿಸಿದ 28 ವಿದ್ಯಾರ್ಥಿಗಳಿಗೆ ಒಟ್ಟು 35 ಚಿನ್ನದ ಪದಕಗಳನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರದಾನ ಮಾಡಿದರು.

## ಲಸಿಕಾ ಸಾಧಕನಿಗೆ ಗೌರವ

ಕರೊನಾಕ್ಕೆ ಪ್ರತಿರೋಧ ತೋರುವ ಕೋವ್ಯಾಕ್ಸಿನ್ ಸೇರಿ ಹಲವು ಲಸಿಕೆಗಳನ್ನು ಉತ್ಪಾದಿಸುವ ಮೂಲಕ ಲಸಿಕಾ ವಿಜ್ಞಾನ ಕ್ಷೇತ್ರದಲ್ಲಿ ಛಾಪು ಮೂಡಿಸಿರುವ ಹೈದರಾಬಾದ್ ಭಾರತ್ ಬಯೋಟೆಕ್‌ನ ಸಂಸ್ಥಾಪಕ ಡಾ. ಕೃಷ್ಣಮೂರ್ತಿ ಎಲ್ಲ ಅವರಿಗೆ ಗುರುವಾರ ಕೆಳದಿ ಶಿವಪ್ಪ ನಾಯಕ ಕೃಷಿ ಹಾಗೂ ತೋಟಗಾರಿಕೆ ವಿವಿಯ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. ವಿವಿಯ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಗೌಡಾ ನೀಡಿದ್ದು ವಿಶೇಷವಾಗಿತ್ತು.

26-11-2021
Vv Pg 5A


ಬಳ್ಳಾರಿ ತಾಲೂಕಿನ ಸಿರಿವಾರದ ಹೊಲವೊಂದರಲ್ಲಿ ಮೆಣಸಿನ ಬೆಳೆ ಕೊಳೆಯುತ್ತಿರುವುದು.

# ಮೆಣಸಿನಕಾಯಿ ಬೆಳೆಗೆ ಗ್ಲುಕೋಸ್ ನೀಡಿಕೆ!

■ ವೀರನಗೌಡ ಪಾಟೀಲ್

ಬಳ್ಳಾರಿ: ಮಳೆಯಿಂದಾಗಿ ನೆಲಕಚ್ಚಿರುವ ಮೆಣಸಿನ ಬೆಳೆ ಉಳಿಸಿಕೊಳ್ಳಲು ನಮ್ಮ ಜಿಲ್ಲೆಯ ರೈತರು ಗ್ಲುಕೋಸ್ ಸಿಂಪಡಣೆ ಮಾಡುತ್ತಿದ್ದಾರೆ!

ಅಚ್ಚರಿ ಅನ್ನಿಸಿದರೂ ಇದು ಸತ್ಯ.

ತೇವಾಂಶ ಹೆಚ್ಚಾಗಿ ಮೆಣಸಿನಬೆಳೆ ಬೇರು ಕೊಳೆತು ಸಸಿ ಒಂದು ಹಂತಕ್ಕೆ ಬಂದು ಬೆಳೆಯದೆ ಅಷ್ಟಕ್ಕೆ ನಿಂತಿವೆ. ಅವು ಕೊಳೆಯದೆ ಇರಲು ನೆರೆಯ ಆಂಧ್ರಪ್ರದೇಶದ ರೈತರು ಈ ಗ್ಲುಕೋಸ್, ಸಕ್ಕರೆ ಪ್ರಯೋಗ ಮಾಡಿ ಯಶ ಕಂಡಿದ್ದಾರೆ ಎಂದು ಕೇಳಿದ ರೈತರು ಇಲ್ಲಿಯೂ ಇಂತಹದ್ದೊಂದು ಪ್ರಯತ್ನ ಮಾಡುತ್ತಿದ್ದಾರೆ.

ಒಂದು ಎಕರೆ ಮೆಣಸಿನಕಾಯಿ ಬೆಳೆಗೆ 250 ಗ್ರಾಂ ಗ್ಲುಕೋಸ್, 250 ಗ್ರಾಂ ಸಕ್ಕರೆ, ಒಂದಿಷ್ಟು ಯೂರಿಯಾ, ಅಮೋನಿಯಂ ಸಲ್ಫೇಟ್ ದ್ರಾವಣ ಬೆರೆಸಿ, ಸಿಂಪಡಣೆ ಮಾಡುತ್ತಿದ್ದಾರೆ. ಇದರಿಂದಾಗಿ ಏಕಾಏಕಿ ಗ್ಲುಕೋಸ್‌ಗೆ ಭಾರೀ ಬೇಡಿಕೆ ಬಂದಿದೆ. ಔಷಧ, ಗೊಬ್ಬರ ಮಾರಾಟಗಾರರು ಹೇಳುವಂತೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ರೈತರು ಬೆಳೆ ಹಾಕಿದ್ದಾರೆ. ಇದೀಗ ಸತತ ಮಳೆಯಿಂದಾಗಿ ಬೆಳೆ ನೆಲ ಕಚ್ಚಿದೆ. ಇದನ್ನು ಕಾಪಾಡಿಕೊಳ್ಳಲು ಇದೂ ಒಂದು ಯತ್ನ ಎಂಬಂತೆ ರೈತರು ಮಾಡುತ್ತಿದ್ದಾರೆ. ಇತ್ತ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರು ಹೇಳುವಂತೆ ಗ್ಲುಕೋಸ್ ಸಿಂಪಡಣೆಯಿಂದ ಯಾವುದೇ ಪರಿಣಾಮ ಬೀರಲ್ಲ. ಬದಲಿಗೆ ಯೂರಿಯಾ ಸಿಂಪಡಣೆಯಿಂದ ಒಂದಿಷ್ಟು ಬೆಳೆ ಕಾಪಾಡಿಕೊಳ್ಳಬಹುದಂತೆ.

ಅಕಾಲಿಕ ಹಿಂಗಾರಿ ಮಳೆಯಿಂದಾಗಿ ರೈತರ ಸ್ಥಿತಿ ಈಗ ಕೈಗೆ ಬಂದ ತುತ್ತು ಬಾಯಿಗೆ ಬಾರದು ಎಂಬಂತೆ ಆಗಿದೆ. ದಷ್ಟಪುಷ್ಟವಾಗಿ ಬೆಳೆದ ಮೆಣಸಿನಗಿಡಗಳು ಅಲ್ಲಿಗೆ ನಿಂತಿರುವುದರಿಂದ ಮೆಣಸಿನಕಾಯಿ ಬಿಡುವುದೇ ಅನುಮಾನ. ನಿಧಾನಕ್ಕೆ ಬೇರು ಕೊಳೆತು ಗಿಡ ಒಣಗುತ್ತವೆಯಂತೆ. ಇದನ್ನು ಉಳಿಸಿಕೊಳ್ಳಲು ರೈತರು ಇನ್ನಿಲ್ಲದ ಕಸರತ್ತು ಮಾಡುತ್ತಿದ್ದಾರೆ. ಅದರ ಭಾಗವಾಗಿ ಗ್ಲುಕೋಸ್ ನೀಡಿಕೆಯೂ ಒಂದಾಗಿದೆ.

26-11-2021
Sk Pg 04

# As farmers dig in on MSP, govt experts point out cons

## 'Farmers May End Up Being The Losers'

Vishwa.Mohan@timesgroup.com



ANI

Legalising minimum support price to procure 23 crops would disrupt the market equilibrium, say experts

**New Delhi:** Even as farm unions are pitching for a legal guarantee to minimum support price (MSP), experts in the government say that legalising MSP to procure 23 crops would disrupt the market equilibrium, drive out private trade, and lead to inflation and a decline in agri exports.

Officials feared that farmers would actually be hit and cited NITI Aayog's working paper on farm reforms to argue that liberalised markets were more favourable to growth than government support and interventions in the market over a period of time.

NITI Aayog member Ramesh Chand noted in the paper that segments like horticulture, milk and fishery (where market intervention by the government is either nil or very little) showed 4-10% annual growth whereas the growth rate in cereals, where MSP and other interventions are quite high, remained at 1.1% after 2011-12. Besides, there is a peaking of benefits with cereals.

Chand cited the example of Maharashtra, where an experiment of legal intervention for ensuring MSP in 2018 failed, forcing the state government to abandon the initiative. "Economic theory as well experience indicates that the price level that is not supported by demand and supply cannot be sustained through legal means," said Chand, an agriculture economist.

He, however, kept the floor open for suggestions, saying if according legal or mandatory status ensured MSP to farmers, it would be the easiest way for any government to help farmers get desired prices. This could be done by state governments without central intervention, he said and cited the example of Kerala, where the state government last year announced minimum prices for 16 fruits and vegetables.

The paper, quoted extensively by officials in the ministry, also cited the example of sugarcane — where the support price (fair and remunerative price) is the statutory minimum price — and pointed out the accumulation of thousands of crores in arrears as private sugar mills could not find FRP for sugarcane matching with sugar prices.

Referring to practical difficulties in getting the private sector on board for buying at legally guaranteed MSP, officials said the higher procurement cost would mean increase in prices of foodgrains, leading to inflation, which would eventually affect the poor. "It will also impact India's farm exports, accounting for 11% of the total exports of commodities, if the MSP is higher than the prevailing rates at international markets," said officials. They also said that since the government would have to procure all marketable surplus in the absence of private participation, it would lead to a huge burden on the exchequer.

Officials have not backed their claims with specific data but farmers said the government would not be spending more than an "additional amount" of Rs 1 lakh crore annually if it decided to buy the entire marketable surplus.

08-11-2021 Times of Ind Pg 01

08-11-2021 Pv Pg 04

# 'ಬೆಳೆ ಹಾನಿ: ಮುಚ್ಚಿಡುವ ಪ್ರಶ್ನೆಯೇ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕಾಲಿಕ ಮಳೆಯಿಂದ ರಾಜ್ಯದಲ್ಲಿ ಆಗಿರುವ ಬೆಳೆ ಹಾನಿ ವಿಚಾರವನ್ನು ಮುಚ್ಚಿಡುವ ಪ್ರಶ್ನೆಯೇ ಇಲ್ಲ. ಸಂತ್ರಸ್ತರಿಗೆ ಪರಿಹಾರ ತಲುಪಿಲ್ಲ ಎಂಬ ಕಾಂಗ್ರೆಸ್ ಆರೋಪದಲ್ಲಿ ಹುರುಳಿಲ್ಲ' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಗುರುವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬೆಳೆ ಹಾನಿಗೆ ರೈತರಿಗೆ ಪರಿಹಾರ ತಲುಪಲಿದೆ. ಈ ಭಗ್ಗೆ ವಿರೋಧ ಪಕ್ಷಗಳಿಗೆ ಆತಂಕ ಬೇಡ. ಸಂತ್ರಸ್ತರಿಗಲ್ಲದೆ, ಕೃಷ್ಣ ಬೈರೇಗೌಡ, ಸಿದ್ದರಾಮಯ್ಯ ಅವರಿಗೆ ಪರಿಹಾರ ನೀಡಬೇಕಾ' ಎಂದೂ ವ್ಯಂಗ್ಯವಾಗಿ ಪ್ರಶ್ನಿಸಿದರು.

'ಕಂದಾಯ ಹಾಗೂ ಕೃಷಿ ಇಲಾಖೆಯಿಂದ ಜಂಟಿ ಸಮೀಕ್ಷೆ ನಡೆದಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್), ರಾಜ್ಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮಾರ್ಗಸೂಚಿಯಂತೆ ತಕ್ಷಣ ಪರಿಹಾರ ಕೊಡಲು ಸೂಚನೆ ನೀಡಲಾಗಿದೆ' ಎಂದರು.

'ನವೆಂಬರ್ ತಿಂಗಳಲ್ಲಿ 5.56 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಫಸಲ್ ಭಿಮಾ ಯೋಜನೆಯಡಿ ಈಗಾಗಲೇ ಬೆಳೆ ಹಾನಿ ಸಮೀಕ್ಷೆ ಮಾಡಲಾಗಿದೆ. ವಿಮಾ ಕಂಪನಿಗಳ ಜೊತೆ ಸಭೆ ನಡೆಸಿದ್ದು, ಪರಿಹಾರ ನೀಡಲು ಸೂಚನೆ ನೀಡಲಾಗಿದೆ' ಎಂದರು.

ಅಡಕೆ ಹಾಳೆಗೆ ಹಳದಿರೋಗ | ಶೃಂಗೇರಿ ಸುತ್ತಮುತ್ತಲ ಜನರ ಉದ್ಯೋಗಕ್ಕೂ ಆಪತ್ತು

# ಅಡಕೆ ಟೋಪಿ ತಯಾರಿಕೆಗೂ ಸಿಗದ ಹಾಳೆ

• ರಮೇಶ್ ಕರುವಾನೆ

**ಶೃಂಗೇರಿ:** ಅಡಕೆ ಹಾಳೆಗೆ ಹಳದಿ ರೋಗ ತಗುಲಿರುವುದರಿಂದ ಟೋಪಿ ತಯಾರಿಸುವ ಕೆಲಸಗಾರರ ಜೀವನದ ಮೇಲೆ ಪರಿಣಾಮ ಬೀರಿದೆ. ಇದರಿಂದ ಆರ್ಥಿಕವಾಗಿ ನಷ್ಟ ಅನುಭವಿಸುವಂತಾಗಿದೆ..

ಮಲೆನಾಡಿನಲ್ಲಿ ಕಾರ್ಮಿಕರು, ರೈತರು ಅಡಕೆ ಟೊಪ್ಪಿ ಬಳಸುವರು. ಈ ಟೋಪಿ ತಯಾರಿಸುವ ಕಾರ್ಯವನ್ನು ಮೆಣಸೆ ಗ್ರಾಪಂನ ಅಣಗಲಬೈಲಿನ ಗಣೇಶಯ್ಯ ಅವರು ತನ್ನ ಅಣ್ಣ ಕೃಷ್ಣಮೂರ್ತಿ ಅವರಿಂದ ಕಲಿತು ನೂರಾರು ಮಂದಿ ಸ್ಥಳೀಯರಿಗೆ ಉದ್ಯೋಗ ನೀಡಿದ್ದರು. ಹಾಳೆ ಟೋಪಿ ತಲೆಗೆ ರಕ್ಷಣೆ ನೀಡುವುದಲ್ಲದೇ, ಯಾವುದೇ ಅಡ್ಡ ಪರಿಣಾಮ ಉಂಟಾಗದು. ಬಿಸಿಲು, ಮಳೆಯಿಂದ ರಕ್ಷಣೆ ನೀಡುತ್ತಿತ್ತು.

**ಟೊಪ್ಪಿ ತಯಾರಿಸುವ ಮೊದಲು:** ಅಡಕೆ ತೋಟದಲ್ಲಿ ಡಿಸೆಂಬರ್‌ನಿಂದ ಮಾರ್ಚ್‌ವರೆಗೂ ಬೀಳುವ ಗುಣಮಟ್ಟದ ಅಡಕೆ ಸೋಗೆಯ ಒಂದು ಭಾಗವಾದ ಹಾಳೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಅಡಕೆ ಮರದಲ್ಲಿ ಸಿಂಗಾರ ಇರುವ ಸಂದರ್ಭದ ಅಗಲವಾದ ಹಾಳೆ ಇದಕ್ಕೆ ಯೋಗ್ಯವಾಗಿದೆ. ಬೆಳಗಿನ ಸಮಯದಲ್ಲಿ ಇಂಥಹ ಸೋಗೆಯನ್ನು ಸಂಗ್ರಹಿಸಿ, ಹಾಳೆ ಕತ್ತರಿಸಿ ಸಂಗ್ರಹಿಸಿಡಬೇಕು. ಸಂಗ್ರಹ ಮಾಡಿಟ್ಟ ಹಾಳೆ ಶಿಲೀಂದ್ರ ತಗುಲದಂತೆ ಒಣಗಿಸಿ, ಹಾಳಾಗದಂತೆ ಎಚ್ಚರಿಕೆ ವಹಿಸಬೇಕು.

**ತಾಳ್ಮೆಯಿಂದ ಕುಸರಿ ಕೆಲಸ:** ಒಂದು ಹಾಳೆ ಟೋಪಿಗೆ ಎರಡು ಹಾಳೆಗಳ ಅಗತ್ಯವಿದೆ. ಕುಸುರಿ ಕೆಲಸಕ್ಕೆ ತಾಳ್ಮೆ ಅಗತ್ಯ. ಬೇಸಿಗೆ ಹಾಗೂ ಮಳೆಗಾಲದಲ್ಲಿ ರಕ್ಷಣೆ ನೀಡುವ ಟೋಪಿಗೆ ಇನ್ನೂ ಸಾಕಷ್ಟು ಬಳಕೆದಾರರಿದ್ದಾರೆ. ಸಂಗ್ರಹಿಸಿಟ್ಟುಕೊಂಡ ಹಾಳೆಯನ್ನು ಬಿಡುವಿನ ವೇಳೆಯಲ್ಲಿ ಟೋಪಿ ಮಾಡಲಾಗುತ್ತದೆ. ಒಂದು ಟೋಪಿಯನ್ನು ಕ್ರಮ ಬದ್ಧವಾಗಿ ಹೊಲಿಯಲು ಕನಿಷ್ಠ ಎರಡು ಗಂಟೆ ಶ್ರಮಿಸಬೇಕು. ದಿನಕ್ಕೆ ಒಂದು ಅಥವಾ ಎರಡು ಟೋಪಿ ಸಿದ್ಧಪಡಿಸುವ ಗಣೇಶಯ್ಯ ಅವರು ಸಿದ್ಧಪಡಿಸುವ ಟೋಪಿಗೆ ಪಟ್ಟಣದಲ್ಲಿ ಬೇಡಿಕೆ ಇದೆ. ಬೇಡಿಕೆಗೆ ಅಗತ್ಯ ಇರುವಷ್ಟು ಸಿದ್ಧಪಡಿಸುವುದು ಕಷ್ಟವಾಗುತ್ತಿದೆ ಎನ್ನುತ್ತಾರೆ.



ಶೃಂಗೇರಿ ತಾಲೂಕಿನ ಅಣಗಲಬೈಲಿನ ಗಣೇಶಯ್ಯ ಅವರು ಅಡಕೆ ಹಾಳೆಯಿಂದ ಟೋಪಿ ಸಿದ್ಧಪಡಿಸುತ್ತಿರುವುದು.

**ಅಡಕೆ ತೋಟಕ್ಕೂ ರೋಗ, ಹಾಳೆಗೆ ಬರ:** ಬಹುತೇಕ ಅಡಕೆ ತೋಟ ಹಳದಿ ಎಲೆ ರೋಗಕ್ಕೆ ತುತ್ತಾಗಿವೆ. ಇದರಿಂದ ಟೋಪಿಗೆ ಹೊಂದುವ ಹಾಳೆ ಒಟ್ಟುಗೂಡಿಸುವುದೇ ಸವಾಲಾಗಿದೆ. ಹಣ ಕೊಟ್ಟು ಖರೀದಿ ಮಾಡುವುದು ಆದಾಯ ತರುವ ಉದ್ಯೋಗವಲ್ಲ. ಪ್ರವಾಸಿ ಕೇಂದ್ರವಾಗಿರುವ ಇಲ್ಲಿ ಟೋಪಿಗೆ ಸಾಕಷ್ಟು ಬೇಡಿಕೆ ಇದೆ. ಇದು ಕಾರ್ಮಿಕರಿಗೆ ಅಗತ್ಯವಾಗಿರುವ ಟೋಪಿ. ಕೇವಲ ಮೋಜಿಗಾಗಿ ಕೊಂಡೊಯ್ಯುವವರಿಗೆ ಮಾರಾಟ ಮಾಡಲು ನನಗೆ ಆಸಕ್ತಿ ಇಲ್ಲ ಎನ್ನುತ್ತಾರೆ ಗಣೇಶಯ್ಯ.

> **ನಮ್ಮ ಮನೆಯಲ್ಲಿ ಎರಡು ದಶಕದಿಂದ ಸಿದ್ಧಪಡಿಸುತ್ತಿದ್ದ ಹಾಳೆ ಟೋಪಿಯನ್ನು ತಯಾರಿಸುತ್ತಿದ್ದೇವೆ. ಅಡಕೆ ತೋಟಕ್ಕೆ ಹಳದಿ ರೋಗ ಬಂದ ನಂತರ ಸೂಕ್ತ ಹಾಳೆ ದೊರಕುವುದು ದೊಡ್ಡ ಸಮಸ್ಯೆಯಾಗಿದೆ. ಲಾಭ ಅಥವಾ ನಷ್ಟ ಎಂದು ಪರಿಗಣಿಸಿಲ್ಲ. ಬಡವರು,ಕಾರ್ಮಿಕರು ಬಳಸುವ ಟೋಪಿ ಅಗತ್ಯವಿರುವವರಿಗೆ ದೊರಕಲಿ. ವಾಣಿಜ್ಯ ಉದ್ದೇಶದಿಂದ ಇದನ್ನು ಮಾಡುತ್ತಿಲ್ಲ.**
> ■ ಅಣಗಲಬೈಲು ಗಣೇಶಯ್ಯ, ಶೃಂಗೇರಿ

> **ಅಡಕೆ ಹಾಳೆಯಿಂದ ಟೋಪಿ ಸಿದ್ಧಪಡಿಸುವವರ ಸಂಖ್ಯೆ ಕಡಿಮೆಯಾಗಿದೆ. ಬಳಕೆ ಮಾಡುವ ರೈತರು ಕಾರ್ಮಿಕರಿಗೆ ತುಂಬಾ ಅಗತ್ಯವಾಗಿದೆ. ಕೊಳ್ಳುವವರಿಗೆ ಇದು ದುಬಾರಿ, ಇದರ ತಯಾರಿಕೆಗೆ ಶ್ರಮವಿದೆ. ನಮ್ಮ ಅಂಗಡಿಯಲ್ಲಿ ಪ್ರತಿ ವರ್ಷ ಸಾಕಷ್ಟು ಜನರು ಟೋಪಿ ಖರೀದಿ ಮಾಡುವರು. ಇಂಥಹ ಗೃಹ ಉದ್ಯಮಕ್ಕೆ ಸರಕಾರ ಪ್ರೋತ್ಸಾಹ ನೀಡಬೇಕು.**
> ■ ಸುಂಕುರ್ಡಿ ತ್ಯಾಗರಾಜ್, ಶೃಂಗೇರಿ

## ಮಣ್ಣಾದ ಈರುಳ್ಳಿ, ಮೆಣಸಿನಕಾಯಿ


• ಮೆಹೆಬೂಬ ಎಚ್. ಮೋತೆಖಾನ್

**ರೋಣ:** ಕಳೆದ ವಾರ ಸುರಿದ ಅಕಾಲಿಕ ಮಳೆಯಿಂದ ಈರುಳ್ಳಿ ಮತ್ತು ಮೆಣಸಿನಕಾಯಿ ಬೆಳೆ ಅಪಾರ ಪ್ರಮಾಣದಲ್ಲಿ ನಾಶವಾಗಿದೆ.

ಕಟಾವಿಗೆತಯಾರಾಗಿದ್ದಮೆಣಸಿನಕಾಯಿ ಮಳೆ ಹೊಡೆತಕ್ಕೆ ನೆಲಕ್ಕೆ ಉದುರಿದೆ. ರೋಣ ತಾಲೂಕಿನಲ್ಲಿ 12 ಸಾವಿರ ಹೆಕ್ಟೇರ್‌ನಲ್ಲಿ ಈರುಳ್ಳಿ ,ಮಿಶ್ರ ಬೆಳೆಯಾಗಿ ಎರಡು ಸಾವಿರ ಹೆಕ್ಟೇರ್‌ನಲ್ಲಿ ಮೆಣಸಿನಕಾಯಿ ಬೆಳೆಯಲಾಗಿತ್ತು. ಬಹುತೇಕ ಕಡೆಯಲ್ಲಿ ಈರುಳ್ಳಿ ಜೊತೆಗೆ ಮೆಣಸಿನಕಾಯಿ ಬೆಳೆಗೂ ಹಾನಿಯಾಗಿದೆ.

**ತೇವಾಂಶದಿಂದ ಈರುಳ್ಳಿ ನಾಶ:** ತೋಟಗಾರಿಕೆ ಇಲಾಖೆ ಸಮೀಕ್ಷೆಯಂತೆ 4.250 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಈರುಳ್ಳಿ ಮಳೆಯಿಂದ ನಾಶವಾಗಿದೆ. 446 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಮೆಣಸಿನಕಾಯಿಗೆ ಹಾನಿಯಾಗಿದೆ.ಸಮೀಕ್ಷೆ ಇನ್ನೂ ಬಾಕಿಯಿದ್ದು, ಇನ್ನಷ್ಟು ಪ್ರದೇಶಗಳಲ್ಲಿ ಬೆಳೆ ನಾಶವಾಗಿರುವ ಸಾಧ್ಯತೆ ಇದೆ.

**ಬೆಳೆ ಉಳಿಸಿಕೊಳ್ಳುವುದೇ ಸಾಹಸ:** ಮಳೆಯಿಂದ ಭೂಮಿಯ ತೇವಾಂಶ ಹೆಚ್ಚಾಗಿರುವ ಕಾರಣ ಕಟಾವಿಗೆ ಬಂದಿರುವ ಬೆಳೆ ಉಳಿಸಿಕೊಳ್ಳಲು ರೈತರು ಹೆಣಗಾಡುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಜಮೀನಿಗೆ ಸರಿಯಾದ ರಸ್ತೆ ಸಂಪರ್ಕ ಇಲ್ಲದಿರುವುದು ಕೂಡ ಬೆಳೆ ರಕ್ಷಣೆಗೆ ಅಡಚಣೆಯಾಗಿದೆ.



**4,250 ಹೆಕ್ಟೇರ್ ಈರುಳ್ಳಿ, 446 ಹೆಕ್ಟೇರ್ ಮೆಣಸಿನಕಾಯಿ ನಾಶ**

> **ರೋಣ ತಾಲೂಕಿನಲ್ಲಿ 12 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬಿತ್ತನೆಯಾಗಿದ್ದು 4,250 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿ ಸಂಭವಿಸಿದೆ. 2 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆಯಲಾಗಿದ್ದು 446 ಹೆಕ್ಟೇರ್ ಪ್ರದೇಶದ ಬೆಳೆಗೆ ಹಾನಿಯಾಗಿದೆ. ಸಮೀಕ್ಷೆಯ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ಸಲ್ಲಿಸುತ್ತೇವೆ.**
> ■ ಬಿ.ಪಿ.ಬೆನಹಾಳ, ಸಹಾಯಕ ತೋಟಗಾರಿಕೆ ನಿರ್ದೇಶಕರು ರೋಣ

> **ಮಳೆಯಿಂದ ಈರುಳ್ಳಿ ಮತ್ತು ಮೆಣಸಿನಕಾಯಿ ಹಾನಿಯಾಗಿದೆ. ಅಳಿದುಳಿದ ಮೆಣಸಿನಕಾಯಿ, ಈರುಳ್ಳಿ ಬೆಳೆಯ ಕಟಾವು ಮಾಡಲು ಸಾಧ್ಯವಾಗುತ್ತಿಲ್ಲ. ಸರಕಾರ ರೈತರಿಗೆ ಆಗಿರುವ ನಷ್ಟವನ್ನು ಸೂಕ್ತ ಕಾಲಕ್ಕೆ ನೀಡಬೇಕಾಗಿದೆ.**
> ■ ರೈತರು, ರೋಣ ತಾಲೂಕು

**08-11-2021**
**Hd Pg 02**

ಮಾರುಕಟ್ಟೆಗೆ ಬಾರದ ಹೊಸ ಫಸಲು

# ಅರ್ಧ ಲಕ್ಷಕ್ಕೆ ಏರಿದ ಚಾಲಿ ದರ

• ಗಣಪತಿ ಹೆಗಡೆ

ಶಿರಸಿ: ನಗರದ ಟಿಎಸ್ಎಸ್ ಮಾರುಕಟ್ಟೆಯಲ್ಲಿ ಗುರುವಾರ ಕ್ವಿಂಟಲ್ ಚಾಲಿ ಅಡಿಕೆ ದರ ₹ 50 ಸಾವಿರದ ಗಡಿ ದಾಟಿದೆ. ಇದು ಈ ವರ್ಷದ ದಾಖಲೆ. ಕಳೆದ ಕೆಲವು ದಿನಗಳಿಂದ ಕ್ವಿಂಟಲ್‌ಗೆ ₹ 45 ಸಾವಿರದಿಂದ ₹ 46 ಸಾವಿರದವರೆಗಿನ ದರದಲ್ಲಿ ಚಾಲಿ ಮಾರಾಟ ಆಗುತ್ತಿತ್ತು.

ಈಗ ಕ್ವಿಂಟಲ್‌ಗೆ ₹ 50 ಸಾವಿರದ ಗಡಿ ದಾಟಿದೆ. ಕೆಂಪಡಿಕೆ ದರ ಕ್ವಿಂಟಲ್‌ಗೆ ₹ 49 ಸಾವಿರ ಇದ್ದು, ಅದನ್ನು ಮೀರಿದ ದರ (ಕ್ವಿಂಟಲ್‌ಗೆ ₹ 50,099) ಹಳೆ ಚಾಲಿಗೆ ಬಂದಿದೆ.

'ನವೆಂಬರ್ ಹೊತ್ತಿಗೆ ಕೇರಳ ಭಾಗದಲ್ಲಿ ಹೊಸ ಚಾಲಿ ಮಾರುಕಟ್ಟೆಗೆ ಬರುತ್ತಿತ್ತು. ಈ ಬಾರಿ ನಿರಂತರ ಮಳೆಯಿಂದಾಗಿ ಕೊಯ್ಲು ಸಾಧ್ಯವಾಗದೇ ಆವಕ ಆಗಿಲ್ಲ. ಇದೇ ವೇಳೆ ಉತ್ತರ ಭಾರತದಲ್ಲಿ ಹೆಚ್ಚು ಬೇಡಿಕೆಯೂ ಇರುವುದರಿಂದ ಹಳೆಯ ಚಾಲಿಗೆ ದರ ಹೆಚ್ಚಳವಾಗಿದೆ' ಎಂದು ಟಿಎಸ್ಎಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ರವೀಶ ಹೆಗಡೆ ತಿಳಿಸಿದರು.

'ಜನವರಿ ಅಂತ್ಯದ ವೇಳೆಗೆ ಹೊಸ ಫಸಲು ಆವಕಗೊಂಡರೆ ಚಾಲಿಯ ಈಗಿನ ದರ ಇಳಿಕೆ ಆಗಬಹುದು' ಎನ್ನುತ್ತಾರೆ ಅವರು.

'ಕೊಯ್ಲಿನ ಅವಧಿಯಲ್ಲಿ ಮಳೆ ಆಗುತ್ತಿರುವ ಕಾರಣ ಅಡಿಕೆ ಹಣ್ಣಾಗುತ್ತಿದೆ. ಹೀಗಾಗಿ ಈ ಬಾರಿ ಕೆಂಪಡಿಕೆ ಪ್ರಮಾಣ ಇಳಿಕೆಯಾಗುವ ಸಾಧ್ಯತೆ ಇದೆ' ಎಂಬುದು ಮಾರುಕಟ್ಟೆ ತಜ್ಞರ ಅಭಿಪ್ರಾಯ.

ಚಾಲಿ ಅಡಿಕೆಗೆ ಈಗ ದೊರೆತಿರುವ ದರ ರೈತರಲ್ಲಿ ಹೊಸ ನಿರೀಕ್ಷೆ ಹುಟ್ಟಿಸಿದೆ. ಕೊಯ್ಲು ವಿಳಂಬ ಮಾಡಿ ಕೆಂಪಡಿಕೆಗಿಂತ ಹೆಚ್ಚು ಚಾಲಿ ಅಡಿಕೆ ಸಿದ್ಧಪಡಿಸುವ ಇಂಗಿತವನ್ನು ಶಿರಸಿ, ಸಿದ್ದಾಪುರ ಭಾಗದ ಹಲವು ರೈತರು ವ್ಯಕ್ತಪಡಿಸಿದ್ದಾರೆ.



ಶಿರಸಿಯ ಟಿಎಸ್ಎಸ್‌ನ ಅಡಿಕೆ ಪ್ರಾಂಗಣದಲ್ಲಿ ಮಾರಾಟಕ್ಕೆ ಬಂದಿದ್ದ ಚಾಲಿ ಅಡಿಕೆ –ಪ್ರಜಾವಾಣಿ ಚಿತ್ರ

> **ಸದ್ಯ, ಚಾಲಿ ಅಡಿಕೆ ದರ ದಾಖಲೆಯ ಮಟ್ಟ ತಲುಪಿದೆ. ಆದರೆ ಈ ದರ ಸ್ಥಿರವಾಗಿರುವ ಸಾಧ್ಯತೆ ಕಡಿಮೆ**
> **ರವೀಶ ಹೆಗಡೆ,** ಪ್ರಧಾನ ವ್ಯವಸ್ಥಾಪಕ, ಟಿಎಸ್ಎಸ್ ಸಂಸ್ಥೆ ಶಿರಸಿ

**08-11-2021**
**Pv Pg 04**

IN PERSPECTIVE

# Sure, make MSP law, but tie it to demand-supply

MSP for pulses and edible oils will help farmers in the arid regions and also reduce the import bill

SANDIP SEN

Both developments were expected. The Modi government, which had refused to withdraw the bills in the summer and monsoon sessions of Parliament, blinked before the winter session, fearing electoral losses in the two states. The victorious farmer leader Rakesh Tikait promised to hold tractor rallies everyday to Parliament from November 29, when the session begins, to press for MSP law and other demands.

Some Rs 2.5 lakh crore of taxpayers' money – 75% of the Food Corporation of India's (FCI) procurement budget -- is annually poured into buying rice and wheat at MSP. Last year, two grades were purchased -- paddy 'A grade' at Rs 1,888 per quintal and paddy 'ordinary' at Rs 1,868 per quintal, a marginal 1% difference. This 50-year-old practice has ensured that FCI godowns are full of low-quality rice at near 'A grade' prices. FCI godowns are overflowing as supply exceeds demand. Besides, rice and wheat sold in retail markets and through PDS are often priced lower than the MSP procurement price, as a result of which FCI makes huge losses every year. These losses due to the difference between procurement price and supply price, along with distribution costs, is paid to the FCI by the government as food subsidy – again funded by the taxpayer.

But you cannot make the private sector buy and stock wheat and rice at MSP, which India produces much more than it needs. MSP for wheat and rice is unsustainable and hurts the procurement of other crops from the arid regions of the rest of India, and the farm unions know this. So, they want the MSP to be enshrined in law, which will force status quo and ensure continued procurement of rice and wheat at MSP through the 2,500 APMC *mandis*. Hence, 60,000 *mandi arthiyas* (middlemen) are funding the year-long protest.

Interestingly, there are 21 other crops under MSP, besides rice and wheat, for which consumer demand is high and price realisation is better. Among the other crops under MSP are five pulse varieties namely *chana, arhar, urad, moong* and *masur* that require support. These are mostly procured by private traders and command market prices that are two to three times MSP prices. Government buying in pulses is minimal. Similarly, there are seven oil seeds, namely mustard-rapeseed, groundnut, soybean, sunflower, sesame, safflower and nigerseed, where the difference between market price and MSP procurement price is more than double. If MSP is made a law for these 12 crops, it will reduce the inflated kitchen budget of the average Indian household. It would also reduce imports of two million tonnes of pulses and 10-15 million tonnes of edible oil each year.

India is the world's largest consumer and importer of edible oil. Over the last 50 years, we have had a skewed policy favouring oil imports – palm oil imports from Malaysia and Indonesia, soya and sunflower oil imports from Brazil and Russia and olive oil imports from Europe and North America. Indian business houses, sensing opportunity and a huge demand-supply gap, set up plantations and solvent extraction units across the world to export back to India. Import duties were repeatedly slashed to bring down rising prices and reduce food inflation. This hurt domestic production. Last year, India imported 13 million tonnes of edible oil, with the import bill touching Rs 75,000 crore, even as domestic production remained at nine million tonnes.

Pulses and oil seeds are not water-guzzling crops like rice, wheat, jute, sugarcane and cotton. If MSP is made legal and guaranteed for pulses and oil seeds, it will help farmers of the arid regions of India such as Rajasthan, Gujarat, Maharashtra, Madhya Pradesh and parts of Karnataka and also help reduce imports. But, of course, that will go against the interest of the 10,000-strong lobby of commodity traders who form a three-tier cartel led by Swiss commodity major Glencore importing pulses into India, as per a 2,000-page income tax report titled "Appraisal Report in the case of Pulse Importers and Traders Group" submitted to the late Finance Minister Arun Jaitley in 2017. In a country where rich farmers, *mandi* cartels, commodity cartels and vote-bank politics dictate farm policies, there is little hope for the small farmer in distress.

*(The writer is a journalist and author of three books on economic governance)*



08-11-2021
Dec Hrd Pg 06

INCLUSIVE OF BANGALORE TIMES

# Born After A Famine, India A Foodgrain Exporter Now

While It Has A Surplus Of Rice And Wheat, The Country Needs To Raise The Production Of Pulses, Writes **Atul Thakur**

At the time of Independence, just four years after the 1943 Bengal Famine had claimed millions of lives, India was divided into two countries. The new India got 82% of the population but only 75% of the cereal production of the undivided country. So, food security was a major concern from the beginning, and the Foodgrains Policy Commission was created in 1947. Despite the commission's recommendations, foodgrain production plateaued by the late 1950s. The Green Revolution spurred it in the 1960s with high-yield varieties and a more scientific approach to agriculture, and the Food Corporation of India stabilised agricultural prices with market intervention and price support. Because of these steps, India is now a net exporter of foodgrains

ROAD TO 75

## Import-Dependent For 30 Years

In 1951, India's net import of foodgrains was over 40 lakh tonnes, and right up to the 1980s, despite the Green Revolution, it remained a net importer of food


**Net import of cereals**




## More Cereals For Everyone

Per capita availability of cereals has steadily risen from 334g per day in the 1950s to 465g now


**Per capita net availability per day (grams)**




## Not Growing Enough Pulses Though

India is unable to grow enough pulses to meet its domestic demand and still imports them in large quantities, although the imports have dipped in recent years


**Pulses: Net import (in 1,000 tonnes)**




## Less Dal Per Person

Daily per capita availability of pulses today remains below the 1950s' level, although it has been improving over the past 20 years. This is a major nutritional concern because most Indians get their protein from dal


**Per capita net availability per day (grams)**





## Distribution A Bigger Concern Now

Today, India's surplus rice, wheat, etc earn foreign exchange but, ironically, millions of Indians are hungry and malnourished. Experts say a more efficient public distribution system could address this issue


**Rice: Net export (in 1,000 tonnes)**




**Wheat: Net export (in 1,000 tonnes)**




**Foodgrain total**
**Net export (in 1,000 tonnes)**




Graphic: Anil Dinod
Source: FAO, Eco Survey

08-11-2021
Times of Ind Pg 01

08-11-2021
Vsv Pg 08

# ಕೇಂದ್ರಕ್ಕೆ ಪತ್ರ: ಬಿ.ಸಿ.ಪಾಟೀಲ್

**ಬೆಂಗಳೂರು:** ಅಕಾಲಿಕ ಮಳೆಯಿಂದಾದ ಮಳೆನಷ್ಟ ಪರಿಹಾರ ಹೆಚ್ಚಳ ಎನ್‌ಡಿಆರ್‌ಎಫ್ ಅಡಿಯಲ್ಲಿ ಪರಿಹಾರ ಪ್ರಮಾಣದ ಹೆಚ್ಚಳ ರಾಷ್ಟ್ರೀಯ ಮಟ್ಟದಲ್ಲಿ ತೀರ್ಮಾನ ಮಾಡಬೇಕು. ಈ ಬಗ್ಗೆ ಈ ಬಗ್ಗೆ ಕೇಂದ್ರ ಸರಕಾರಕ್ಕೆ ಪತ್ರ ಬರೆಯುವುದಾಗಿ ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಬಿ.ಸಿ.ಪಾಟೀಲ್, ಬೆಳೆನಾಶದ ಬಗ್ಗೆ ಕಂದಾಯ ಹಾಗೂ ಕೃಷಿ ಇಲಾಖೆ ಜಂಟಿ ಸಮೀಕ್ಷೆ ನಡೆಸಿದ್ದು, 11ಲಕ್ಷದ 3555 ಹೆಕ್ಟೇರ್ ಪ್ರದೇಶದಲ್ಲಿ ಜುಲೈ ತಿಂಗಳಲ್ಲಿ ಬೆಳೆ ನಾಶ ಆಗಿದೆ. ನವೆಂಬರ್‌ನಲ್ಲಿ 5 ಲಕ್ಷದ 562 ಹೆಕ್ಟೇರ್ ಭೂಮಿ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, ಸರಕಾರ ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್ ಅಡಿಯಲ್ಲಿ ಪರಿಹಾರ ನೀಡುತ್ತದೆ. ಫಸಲ್ ಬೀಮಾ ಯೋಜನೆಯಡಿ ಬೆಳೆ ಹಾನಿ ಸಮೀಕ್ಷೆ ಮಾಡಲಾಗಿದೆ. ವಿಮಾ ಕಂಪನಿಗಳ ಜೊತೆ ಸಭೆ ಮಾಡಿ ಪರಿಹಾರದ ನೀಡುವ ಬಗ್ಗೆ ಸೂಚನೆ ನೀಡಲಾಗಿದೆ. ಬೆಳೆ ಹಾನಿ ಬಚ್ಚಿಡುವ ಪ್ರಶ್ನೆಯೇ ಇಲ್ಲ. ಸರ್ಕಾರ ಸರಿಯಾದ ರೀತಿಯಲ್ಲಿ ಸ್ಪಂದಿಸುತ್ತಿದೆ. ಬೆಳೆ ನಾಶದ ಬಗ್ಗೆ ಸರ್ಕಾರ ಮುಚ್ಚಿಡುವ ಕೆಲಸ ಮಾಡದೇ ಎಲ್ಲವನ್ನೂ ಪಾರದರ್ಶಕವಾಗಿ ತೆರೆದಿಟ್ಟಿದೆ. ಬೆಳೆ ಪರಿಹಾರ ರೈತರ ಅಕೌಂಟಿಗೆ ಹೋಗುತ್ತದೆಯೇ ವಿನಃ ವಿಪಕ್ಷ ನಾಯಕ ಸಿದ್ದರಾಮಯ್ಯರ ಖಾತೆಗೆ ಹೋಗುವುದಿಲ್ಲ ಎಂದರು.

# ನಾಡಿನ ರೈತರಿಗೆ ಮತ್ತೆ ಗೌರವಿಸುವ ಸಮಯ

ಇಂದಿನಿಂದ ವಿಕ ಸೂಪರ್ ಸ್ಟಾರ್ ರೈತ-2021 | ರಾಜ್ಯದ 31 ಜಿಲ್ಲೆಗಳಲ್ಲಿ ಕಾರ್ಯಕ್ರಮ ಆಯೋಜನೆ | ರಾಜ್ಯಮಟ್ಟದ ಪ್ರಶಸ್ತಿ ವಿತರಿಸಲಿದ್ದಾರೆ ಸಿಎಂ | ರೈತ ಗೌರವಕ್ಕೆ ದಕ್ಕಿದೆ ಅಂತಾರಾಷ್ಟ್ರೀಯ ಮನ್ನಣೆ | 20 ಸಾಧಕರಿಗೆ ಸಿಗಲಿದೆ ರಾಜ್ಯ ಮಟ್ಟದ ಪ್ರಶಸ್ತಿ

**ಬೆಂಗಳೂರು:** ರೈತ ಅಂದರೆ ಸಣಕಲು ಶರೀರ, ಬಾಗಿದ ಬೆನ್ನು, ಹಳೆಯದೊಂದು ಬಟ್ಟೆ, ಹೆಗಲಲ್ಲೊಂದು ಶಾಲು, ನಿಸ್ತೇಜ ಕಣ್ಣುಗಳು, ಕೆದರಿದ ತಲೆ ಕೂದಲು ಎಂಬ ಚಿತ್ರಗಳೇ ಕಣ್ಮುಂದೆ ಬರುತ್ತಿದ್ದ ಕಾಲದಲ್ಲಿ ನಮಗೆಲ್ಲ ಹೊತ್ತು ಹೊತ್ತಿಗೆ ಅನ್ನ ನೀಡುವ ಈ ರೈತರನ್ನು ಇವರೇ ನಿಜವಾದ ಸೂಪರ್ ಸ್ಟಾರ್‌ಗಳು ಎಂದು ಘೋಷಿಸಿ ಕಿರೀಟ ತೊಡಿಸಿ ಗೌರವಿಸಿದ ಹೆಗ್ಗಳಿಕೆಯನ್ನು ವಿಜಯ ಕರ್ನಾಟಕ ಹೊಂದಿದೆ.

ಇಡೀ ದೇಶವೇ ಅಚ್ಚರಿಯಿಂದ ನೋಡುತ್ತಿರುವ, ನಾಡಿನ ರೈತರ ಹೆಮ್ಮೆಯಾಗಿರುವ, ಸರ್ವರ ಆದರಕ್ಕೆ ಪಾತ್ರವಾದ ವಿಜಯ ಕರ್ನಾಟಕ ಸೂಪರ್ ಸ್ಟಾರ್ ರೈತ ಮಹಾಭಿಯಾನದ ನಾಲ್ಕನೇ ಆವತರಣಿಕೆ ಇದೀಗ ತೆರೆದುಕೊಂಡಿದೆ.

ರೈತರ ಕೀಳರಿಮೆ ಹೋಗಲಾಡಿಸಿ, ಅವರ ಆತ್ಮಶಕ್ತಿ ಬಡಿದೆಬ್ಬಿಸಿ ಆತ್ಮಾಭಿಮಾನದಿಂದ ತಲೆ ಎತ್ತಿ ನಿಲ್ಲುವಂತೆ ಮಾಡುವ ಮತ್ತು ವಿಶಿಷ್ಟ ಸಾಧನೆಗಳನ್ನು ಉಳಿದ ರೈತರು ಹಾಗೂ ಉಳಿದ ಜನರಿಗೆ ತಲುಪಿಸುವ ಉದ್ದೇಶದಿಂದ ವಿಜಯ ಕರ್ನಾಟಕ 2018ರಲ್ಲಿ ಮೊದಲ ಬಾರಿಗೆ ಈ ಕಾರ್ಯಕ್ರಮವನ್ನು ಆರಂಭಿಸಿತ್ತು. ನಾಡಿನ ಉದ್ದಗಲಕ್ಕೂ ಸಾಧಕ ರೈತರನ್ನು ಗುರುತಿಸಿ ಜಿಲ್ಲಾಮಟ್ಟದ ಪ್ರಶಸ್ತಿಗಳನ್ನು ನೀಡಿದ್ದಲ್ಲದೆ ಕಳೆದ ಮೂರು ವರ್ಷಗಳಲ್ಲಿ 20 ಮಹಾಸಾಧಕರಿಗೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.




ಸ್ವತಃ ರಾಜ್ಯದ ಮುಖ್ಯಮಂತ್ರಿಗಳೇ ಈ ರಾಜ್ಯ ಮಟ್ಟದ ಪ್ರಶಸ್ತಿಯನ್ನು ವಿತರಣೆ ಮಾಡುವುದು ರೈತರ ಪಾಲಿನ ಅವಿಸ್ಮರಣೀಯ ಕ್ಷಣ. ಮೊದಲ ವರ್ಷ ಎಚ್.ಡಿ. ಕುಮಾರಸ್ವಾಮಿ ಅವರು ಮತ್ತು ಮುಂದಿನ ಎರಡು ವರ್ಷಗಳಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ರೈತರಿಗೆ ಕಿರೀಟ ತೊಡಿಸಿ ಗೌರವಿಸಿದ್ದರು. 2020ರಲ್ಲಿ ಸಿಎಂ ಆಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ಜೋಡೆತ್ತಿನ ಮೂಲಕ ಬಿತ್ತನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವಿಸ್ಮರಣೀಯ ಕ್ಷಣ ಐತಿಹಾಸಿಕ. ಇದರ ಚಿತ್ರ ಕೃಷಿ ಇಲಾಖೆಯ ಸಾಧನೆಯ ರೂಪಕವಾಗಿ ಮೆರೆಯುತ್ತಿದೆ.

**ಪ್ರತಿ ಜಿಲ್ಲೆಯಲ್ಲೂ ವೈಭವ:** ಸೂಪರ್ ಸ್ಟಾರ್ ರೈತ ಕಾರ್ಯಕ್ರಮ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಅದ್ದೂರಿಯಾಗಿ ನಡೆಯುವ ಮೂಲಕ ಸಂಚಲನ ಸೃಷ್ಟಿಯಾಗುತ್ತಿದೆ. ಇದು ಕೇವಲ ಪ್ರಶಸ್ತಿ ಪ್ರದಾನ ಸಮಾರಂಭವಲ್ಲ, ಕೃಷಿ ಕ್ಷೇತ್ರದ ಸರ್ವ ವಲಯಗಳ ಬಗ್ಗೆ ಮಾಹಿತಿ ವಿನಿಮಯ, ಹೊಸ ತಂತ್ರಜ್ಞಾನಗಳ ಪರಿಚಯ, ತಜ್ಞರಿಂದ ಮಾಹಿತಿ, ಎಲ್ಲ ರೀತಿಯ ಗಿಡಗಳ ವಿತರಣೆ, ಬೀಜ-ರಸಗೊಬ್ಬರಗಳ ಮಾರಾಟದ ಮೂಲಕ ಸರ್ವರನ್ನೂ ತೆಕ್ಕೆಗೆ ಎಳೆಯುತ್ತಿದೆ.

ಪ್ರತಿ ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ ಆ ಭಾಗದ ಕೃಷಿ ಸಾಧನೆಯ ಮಜಲುಗಳನ್ನು ಪರಿಚಯಿಸುವ ಆತ್ಯಾಕರ್ಷಕ ಮರವಣಿಗಳನ್ನು ಪ್ರಕಟಿಸಲಾಗುತ್ತದೆ. ವಿಕ ಸೂಪರ್‌ಸ್ಟಾರ್ ರೈತ ಪ್ರಶಸ್ತಿ ಪಡೆದವರು ರಾಜ್ಯೋತ್ಸವ, ಕೃಷಿ ಪಂಡಿತ ಪ್ರಶಸ್ತಿಯನ್ನು ಗಳಿಸಿದ್ದು 'ವಿಕ'ದ ಆಯ್ಕೆಯ ಶಕ್ತಿಯನ್ನು ಪ್ರತಿಬಿಂಬಿಸಿದೆ.














ರೈತರ ಪರ ಧ್ವನಿ ಎತ್ತುವುದರಲ್ಲಿ 'ವಿಜಯ ಕರ್ನಾಟಕ' ಮುಂದಾಳತ್ವ ವಹಿಸಿಕೊಂಡಿದೆ. ವಿಕ ಸೂಪರ್ ಸ್ಟಾರ್ ರೈತ ಕಾರ್ಯಕ್ರಮ ಈಗಾಗಲೇ ಮನೆಮಾತಾಗಿದೆ. ಪತ್ರಿಕೆಯ ಈ ಕೆಲಸ ಶ್ಲಾಘನೀಯವಾದುದು. ರೈತರಿಗೆ ಇಂತಹ ಕಾರ್ಯಕ್ರಮದ ಅಗತ್ಯ ಖಂಡಿತ ಇದೆ. ವಿಕ ಈ ನಿಟ್ಟಿನಲ್ಲಿ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತಿರುವುದಕ್ಕೆ ಅಭಿನಂದಿಸುತ್ತೇನೆ.

**-ಬಿ.ಸಿ.ಪಾಟೀಲ್** ಕೃಷಿ ಸಚಿವ

| | | |
|---|---|---|
| **2018** | | |
| 22 | ಕಾರ್ಯಕ್ರಮ | |
| 150 | ಜಿಲ್ಲಾಮಟ್ಟದಲ್ಲಿ ಪುರಸ್ಕೃತರ ಸಂಖ್ಯೆ | |
| 20 | ರಾಜ್ಯ ಮಟ್ಟದಲ್ಲಿ ಪುರಸ್ಕೃತರು | |
| **2019** | | |
| 26 | ಕಾರ್ಯಕ್ರಮ | |
| 180 | ಜಿಲ್ಲಾಮಟ್ಟದಲ್ಲಿ ಪುರಸ್ಕೃತರ ಸಂಖ್ಯೆ | |
| 20 | ರಾಜ್ಯ ಮಟ್ಟದಲ್ಲಿ ಪುರಸ್ಕೃತರು | |
| **2020** | | |
| 30 | ಕಾರ್ಯಕ್ರಮ | |
| 200 | ಜಿಲ್ಲಾಮಟ್ಟದಲ್ಲಿ ಪುರಸ್ಕೃತರ ಸಂಖ್ಯೆ | |
| 20 | ರಾಜ್ಯ ಮಟ್ಟದಲ್ಲಿ ಪುರಸ್ಕೃತರು | |

## ರೈತ-ಬ್ರಾಂಡ್‌ಗಳ ನಡುವಿನ ಸೇತು

ಟ್ರ್ಯಾಕ್ಟರ್‌ಗಳು, ಕೃಷಿಯಲ್ಲಿನ ನೂತನ ತಂತ್ರಜ್ಞಾನಗಳನ್ನೊಳಗೊಂಡ ಕಳೆ ಕೀಳುವ ಯಂತ್ರ, ಸಿಂಪಡಣೆ ಪರಿಕರಗಳು ಸೇರಿದಂತೆ ನಾನಾ ಮಾದರಿಯ ಕೃಷಿ ಯಂತ್ರೋಪಕರಣಗಳ ಪ್ರದರ್ಶನಕ್ಕೆ ಇದು ಸೂಕ್ತ ಸ್ಥಳ. ಯಂತ್ರೋಪಕರಣ ಮತ್ತು ರಸಗೊಬ್ಬರ ತಯಾರಕರಿಗೆ ಕರ್ನಾಟಕದ 31 ಜಿಲ್ಲೆಗಳಲ್ಲಿ ನಡೆಯುವ ಕಾರ್ಯಕ್ರಮಗಳ ಮೂಲಕ ರೈತರ ಜತೆ ಸಂಪರ್ಕ ಸಾಧಿಸಲು 'ವಿಜಯ ಕರ್ನಾಟಕ ಸೂಪರ್ ಸ್ಟಾರ್ ರೈತ' ವೇದಿಕೆ ಸೃಷ್ಟಿಸಿದೆ. ತಮ್ಮ ವಿನೂತನ ಕೃಷಿ ಉಪಕರಣಗಳು ಹಾಗೂ ತಂತ್ರಜ್ಞಾನಗಳ ಬಗ್ಗೆ ಸ್ಥಳದಲ್ಲೇ ಪ್ರಾತ್ಯಕ್ಷಿಕೆ ನೀಡಿ ರೈತರಿಗೆ ತಲುಪಿಸಲು ಈ ಕಾರ್ಯಕ್ರಮದಿಂದ ಸಾಧ್ಯವಾಗಲಿದೆ. ಅಲ್ಲದೆ, ಕೃಷಿ ಕಾರ್ಯಕ್ಕೆ ಲಭ್ಯವಿರುವ ಹಣಕಾಸು ನೆರವಿನ ಬಗ್ಗೆಯೂ ಮಾಹಿತಿ ನೀಡಲು ಹಣಕಾಸು ಸಂಸ್ಥೆಗಳಿಗೆ ಅವಕಾಶ ಸಿಗುತ್ತದೆ. ಕಾರ್ಯಕ್ರಮದಲ್ಲಿ ಪರಿಚಯವಾಗುವ ಆಧುನಿಕ ಕೃಷಿಯನ್ನು ಅಳವಡಿಸಿಕೊಳ್ಳಲು ಯುವ ರೈತರಿಗೆ ಇದು ಸುವರ್ಣಾವಕಾಶವಾಗಿದೆ.



### ಅಂತಾರಾಷ್ಟ್ರೀಯ ಪ್ರಶಸ್ತಿ ಗರಿ

ವಿಕ ಸೂಪರ್ ಸ್ಟಾರ್ ರೈತ ಕಾರ್ಯಕ್ರಮವು ಇಂಟರ್‌ನ್ಯಾಷನಲ್ ನ್ಯೂಸ್ ಮೀಡಿಯಾ ಅಸೋಸಿಯೇಷನ್ ಗಮನ ಸೆಳೆದಿದೆ. ಈ ವಿಶಿಷ್ಟ ಕಾರ್ಯಕ್ರಮಕ್ಕೆ INMA ಪ್ರಶಸ್ತಿ ಸಂದಿದೆ.

### ಪ್ರಶಸ್ತಿಗೆ ಆಯ್ಕೆ ಹೇಗೆ?

ಮೊದಲಿಗೆ ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿಗೆ ನಾಮಕರಣ ಪ್ರಕ್ರಿಯೆ ನಡೆಯುತ್ತದೆ. ಹೀಗೆ ಬಂದ ಅರ್ಜಿಗಳಲ್ಲಿ ಮೊದಲ ಹಂತದಲ್ಲಿ ಪರಿಷ್ಕರಿಸಿ, ಸ್ಥಳೀಯ ಕೃಷಿ ತಜ್ಞರನ್ನೊಳಗೊಂಡ ಸಮಿತಿಗೆ ನೀಡಲಾಗುತ್ತದೆ ಅವರು 5ರಿಂದ 7 ರೈತರನ್ನು ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಿಕೊಡುತ್ತಾರೆ. ಆ ಬಳಿಕ, ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದವರ ಪೈಕಿ 20 ರೈತರನ್ನು ಮೂವರು ಸದಸ್ಯರ ರಾಜ್ಯ ಮಟ್ಟದ ಕೃಷಿ ತಜ್ಞರ ಸಮಿತಿಯು ಆಯ್ಕೆ ಮಾಡುತ್ತದೆ.

### 1,00,000 ರೈತರು ಭಾಗಿ!

ಈ ಮೂರು ವರ್ಷಗಳ ವಿಕ ಸೂಪರ್ ಸ್ಟಾರ್ ರೈತರ ಕಾರ್ಯಕ್ರಮದಲ್ಲಿ ಸುಮಾರು ಒಂದು ಲಕ್ಷಕ್ಕೂ ಅಧಿಕ ರೈತರು ಪಾಲ್ಗೊಂಡಿದ್ದಾರೆ. ಎಸ್ ಎಸ್ ಆರ್ ಕೇವಲ ಪುರಸ್ಕಾರ ಸಮಾರಂಭ ಮಾತ್ರವೇ ಆಗಿರದೇ ರೈತರಿಗೆ ಕೃಷಿಯ ಬಗ್ಗೆ ಅಮೂಲ್ಯ ಮಾಹಿತಿಯನ್ನು ನೀಡುವ ಅಭಿಯಾನವೂ ಹೌದು.

### 5000ಕ್ಕೂ ಅಧಿಕ ರೈತರು

ವಿಕ ಸೂಪರ್ ಸ್ಟಾರ್ ರೈತ ಕಾರ್ಯಕ್ರಮದ ಅಗಾಧತೆ ಎಷ್ಟೆಂದರೆ, ಕಳೆದ ಮೂರು ವರ್ಷಗಳಲ್ಲಿ ಈ ಪ್ರಶಸ್ತಿಗಾಗಿ ಗುರುತಿಸಲಾದ ಸಾಧಕ ರೈತರ ಸಂಖ್ಯೆ 5000ಕ್ಕೂ ಹೆಚ್ಚು, ಅವರ ಪೈಕಿ 540 ಮಂದಿಗೆ ಈಗಾಗಲೇ ಮೂರು ವರ್ಷಗಳಲ್ಲಿ ಜಿಲ್ಲಾ ಮಟ್ಟದ ಪ್ರಶಸ್ತಿ ನೀಡಲಾಗಿದೆ. ವರ್ಷಕ್ಕೆ ತಲಾ 20 ಮಂದಿಯಂತೆ 60 ಮಂದಿಯನ್ನು ರಾಜ್ಯ ಮಟ್ಟದ ಗೌರವ ನೀಡಿ ಪುರಸ್ಕರಿಸಲಾಗಿದೆ.





ಸಾಧಕ ರೈತರನ್ನು ಗುರುತಿಸಿ, ಅವರನ್ನು 'ಸೂಪರ್ ಸ್ಟಾರ್' ಎಂದು ಗೌರವಿಸುವ ವಿಕದ ಈ ಕೆಲಸ ಅಭೂತಪೂರ್ವ. ಪ್ರಶಸ್ತಿಯಿಂದ ಒಂದಿಷ್ಟು ಯುವಕರಿಗೆ ಪ್ರೇರಣೆ ದೊರಕುವಂತಾಗಲಿ. ಸದಾ ಅನ್ನದಾತರ ಪರವಾಗಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕೃಷಿಯನ್ನು ಪ್ರೋತ್ಸಾಹಿಸುವ ಹಲವು ಯೋಜನೆಗಳನ್ನು ಹೊಂದಿದ್ದು, ಅವುಗಳನ್ನು ರೈತರಿಗೆ ತಲುಪಿಸಲು ಇದು ಅತ್ಯುತ್ತಮ ವೇದಿಕೆಯಾಗಿದೆ.

**- ಡಿ ಚಂದ್ರಮೋಹನ್ ರೆಡ್ಡಿ,** ಕ್ಷೇತ್ರ ಮಹಾ ಪ್ರಬಂಧಕರು, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು



ಸಾಧಕ ರೈತರ ಸಾಧನೆಯನ್ನು ಗುರುತಿಸಿ ಸ್ಫೂರ್ತಿ ತುಂಬುವ ವಿಕೆ ಎಸ್‌ಎಸ್‌ಆರ್ ಅಭಿಯಾನಕ್ಕೆ ಕೋರಮಂಡಲ್ ಇಂಟರ್ ನ್ಯಾಷನಲ್ ಲಿ. ಸತತ 4 ವರ್ಷಗಳಿಂದ ಪ್ರಾಯೋಜಕತ್ವ ವಹಿಸಿ ಬೆಂಬಲವನ್ನು ಕೊಡುತ್ತಾ ಬಂದಿದೆ. ಈ ಅಭಿಯಾನವು ಸತತವಾಗಿ 4 ನೇ ವರ್ಷವೂ ನಡೆಯುತ್ತಿರುವುದು ಅತ್ಯಂತ ಸಂತೋಷದ ವಿಷಯವಾಗಿದೆ.

**-ಕೆ. ಪ್ರಭುಸ್ವಾಮಿ** ಉಪಾಧ್ಯಕ್ಷರು ಕೋರಮಂಡಲ್ ಇಂಟರ್‌ನ್ಯಾಷನಲ್ ಲಿ.



ಜಿಲ್ಲಾ ಮಟ್ಟದ ಕಾರ್ಯಕ್ರಮಗಳ ಮೂಲಕ ರಾಜ್ಯಾದ್ಯಂತ ವಿಕೆ ಎಸ್‌ಎಸ್‌ಆರ್ ಸಂಪೂರ್ಣವಾಗಿ ಆವರಿಸಿಕೊಂಡಿದೆ. ಈ ಪುರಸ್ಕಾರಕ್ಕೆ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆಯಲ್ಲಿ ಮಹಿಳೆಯರು, ಅಂಗವಿಕಲರು, ವೃದ್ಧರು ಮತ್ತು ಯುವ ರೈತರನ್ನು ಒಳಗೊಂಡ 182 ಸ್ಟಾರ್ ರೈತರನ್ನು ಗುರುತಿಸಿರುವುದು ಶ್ಲಾಘನೀಯ.

**- ಸಂಜಯ್ ವರ್ಮಾ** ಪ್ರಾದೇಶಿಕ ಮುಖ್ಯಸ್ಥರು ಎಸ್‌ಟಿಐಎಚ್‌ಎಲ್ ಪ್ರೈ. ಲಿ.



ಮಣ್ಣಿನ ಉತ್ತಮ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಹಾಗೂ ಕೃಷಿಯ ಪ್ರಜ್ವಲ ಭವಿಷ್ಯಕ್ಕಾಗಿ ಜೈವಿಕ ಜೀವಾಣುಗೊಬ್ಬರ ಮತ್ತು ಜೈವಿಕ ಕೀಟನಾಶಕವನ್ನು ರೈತರು ಉಪಯೋಗಿಸಬೇಕು. ಸಾಧಕ ರೈತರನ್ನು ಗುರುತಿಸುವ ವಿಕೆ ಎಸ್‌ಎಸ್‌ಆರ್ ಭಾಗವಾಗುತ್ತಿರುವುದು ನಮಗೆ ಹೆಮ್ಮೆ ತಂದಿದೆ.

**- ಎಸ್.ಜೆ.ರುದ್ರಪ್ರಕಾಶ್** ಪಾಲುದಾರರು, ಸಿದ್ದಗಂಗಾ ಆಯಿಲ್ ಮತ್ತು ಬಯೋ ಇಂಡಸ್ಟ್ರಿ


ಸೌರಭ್ ಅಗರ್ವಾಲ್


ಮಯಾಂಕ್ ತಿವಾರಿ


ಉತ್ಕರ್ಷ ಅಪೂರ್ವ

ರೇಷಮಂಡಿಯು ರೇಷ್ಮೆ ಪೂರೈಕೆ ಸರಪಳಿಯನ್ನು ಡಿಜಿಟಲೀಕರಿಸುತ್ತಿರುವ ಭಾರತದ ಮೊದಲ ಹಾಗೂ ಅತೀ ದೊಡ್ಡ ಬಿಟುಬಿ ಮಾರುಕಟ್ಟೆಯಾಗಿದೆ. ಸೂಪರ್-ಆ್ಯಪ್, ಐಒಟಿ ಸಾಧನ ಮತ್ತು ಹಲವಾರು ಹೊಸ ತಂತ್ರಜ್ಞಾನಗಳ ಮೂಲಕ ರೈತರ ರೇಷ್ಮೆಗೂಡುಗಳಿಂದ ರೀಟೈಲ್ ವ್ಯಾಪಾರಿಗಳವರೆಗೂ ಸೇವೆ ಒದಗಿಸುತ್ತಿದೆ. ವಿಕೆ ಎಸ್‌ಎಸ್‌ಆರ್ ಶ್ಲಾಘನೀಯ ಕಾರ್ಯಕ್ರಮವಾಗಿದೆ.

**-ರೇಷಮಂಡಿ ಸಂಸ್ಥಾಪಕರು**

# ಆರು ಸಾಧಕ ರೈತರಿಗೆ ಇಂದು ಪ್ರಶಸ್ತಿ ಪ್ರದಾನ

**ವಿಕ ಸುದ್ದಿಲೋಕ** ಬೆಂಗಳೂರು ಗ್ರಾ.

ರಾಜ್ಯದ ನಂ.1 ದಿನಪತ್ರಿಕೆ ವಿಜಯ ಕರ್ನಾಟಕದ 2021ನೇ ಸಾಲಿನ 'ಸೂಪರ್ ಸ್ಟಾರ್ ರೈತ' ಕಾರ್ಯಕ್ರಮದ ನಾಲ್ಕನೇ ಆವೃತ್ತಿಗೆ ಶುಕ್ರವಾರ ಚಾಲನೆ ದೊರೆಯಲಿದೆ.

ನೆಲಮಂಗಲ ತಾಲೂಕಿನ ಶಿವಗಂಗೆ ಹತ್ತಿರವಿರುವ ಶ್ರೀಹೊನ್ನಮ್ಮಗವಿ ಮಠ ಸಂಭಾಗಣದಲ್ಲಿ ಬೆಳಗ್ಗೆ 10.00 ಗಂಟೆಗೆ ಕಾರ್ಯಕ್ರಮ ನಡೆಯಲಿದೆ. ಹಿಂದಿನ ವರ್ಷದಿಂದ ವಿಕ ಸೂಪರ್ ಸ್ಟಾರ್ ರೈತ ಪ್ರಶಸ್ತಿ ನೀಡುವ ಕಾರ್ಯಕ್ರಮವನ್ನು ರಾಜ್ಯಾದ್ಯಂತ ನಡೆಸಿಕೊಂಡು ಬರಲಾಗುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇದೇ ನ.26ರ ಶುಕ್ರವಾರ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಚಾಲನೆ ಸಿಗಲಿದ್ದು, ಉಳಿದ ಎಲ್ಲ ಜಿಲ್ಲೆಗಳಲ್ಲೂ ಶೀಘ್ರದಲ್ಲೇ ಕಾರ್ಯಕ್ರಮಗಳು ಜರುಗಲಿವೆ. ಜಿಲ್ಲೆಯ 4 ತಾಲೂಕುಗಳಿಂದ 120ಕ್ಕೂ ಹೆಚ್ಚು ರೈತರು ಅರ್ಜಿಗಳನ್ನು ಸಲ್ಲಿಸಿದ್ದು, ತಾಲೂಕಿಗೊಬ್ಬರಂತೆ ಸಾಧಕ ರೈತರನ್ನು ವಿವಿಧ ಮಾನದಂಡಗಳ ಆಧಾರದಲ್ಲಿ ಸೂಪರ್ ಸ್ಟಾರ್ ರೈತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಅವರನ್ನು ಗೌರವಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ಕೃಷಿಗೆ ಸಂಬಂಧಿಸಿದ ವಿಶೇಷ ಪುರವಣಿ ಕೂಡ ಬಿಡುಗಡೆಗೊಳಿಸಲಾಗುತ್ತಿದೆ.

**ಸೂಪರ್ ಸ್ಟಾರ್ ರೈತ ಕಾರ್ಯಕ್ರಮದ ನಾಲ್ಕನೇ ಆವೃತ್ತಿಗೆ ಇಂದು ಚಾಲನೆ**

ಕಾರ್ಯಕ್ರಮದ ಸಾನ್ನಿಧ್ಯವನ್ನು ಶಿವಗಂಗೆಯ ಶ್ರೀಹೊನ್ನಮ್ಮ ಗವಿ ಮಠದ ಶ್ರೀರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದು, ಜಿಪಂ ಸಿಇಒ ಎಂ.ಆರ್. ರವಿಕುಮಾರ್ ಸಮಾರಂಭ ಉದ್ಘಾಟಿಸಲಿದ್ದಾರೆ. ಬಿಗ್ ಬಾಸ್ ವಿಜೇತ, ನಟ, ಯುವ ರೈತ ಶಶಿ, ಬಮೂಲ್ ನಿರ್ದೇಶಕ ಬಿ.ಆರ್.ಭಾಸ್ಕರ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಜಿ.ಎಸ್. ಜಯಸ್ವಾಮಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ನಾಗರಾಜ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

5 ಲಕ್ಷ ಹೆಕ್ಟೇರ್ ಕೃಷಿ ಬೆಳೆ, 1 ಲಕ್ಷ ಹೆಕ್ಟೇರ್ ತೋಟಗಾರಿಕೆ ಬೆಳೆ ನಷ್ಟ

# ಎಲ್ಲ ಬೆಳೆ ನಷ್ಟಕ್ಕೂ ಪರಿಹಾರ: ಅಶೋಕ್

**ವಿಕ ಸುದ್ದಿಲೋಕ** ಬೆಂಗಳೂರು

ಅಕಾಲಿಕ ಮಳೆಯಿಂದ 5 ಲಕ್ಷ ಹೆಕ್ಟೇರ್ ಕೃಷಿ ಬೆಳೆ ಮತ್ತು 1 ಲಕ್ಷ ಹೆಕ್ಟೇರ್ ತೋಟಗಾರಿಕೆ ಬೆಳೆ ನಷ್ಟವಾಗಿದೆ. ಎಲ್ಲ ಬೆಳೆ ನಷ್ಟಕ್ಕೂ ಪರಿಹಾರ ನೀಡಲಾಗುವುದು. ಈ ಸಂಬಂಧ ಮಾರ್ಗಸೂಚಿ ಅನ್ವಯ ನವೆಂಬರ್ 30ರ ಒಳಗೆ ಜಂಟಿ ಸಮೀಕ್ಷೆ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದ್ದಾರೆ.



ವಿಧಾನಸೌಧದಲ್ಲಿ ಮಾತನಾಡಿದ ಅವರು, ''ಕೊಡಗು, ಹಾಸನ, ಮಂಡ್ಯ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ತೆರಳಿ ಪರಿಶೀಲನೆ ನಡೆಸಿದ್ದೇನೆ. ಬೆಳೆ ಹಾನಿಗೆ ಸಂಬಂಧಿಸಿ ಈವರೆಗೆ 2.2 ಲಕ್ಷ ರೈತರ ಖಾತೆಗೆ ಒಟ್ಟಾರೆ 180 ಕೋಟಿ ರೂ. ಜಮಾ ಮಾಡಲಾಗಿದೆ. ಮನೆ ಹಾನಿಗೆ ಸಂಬಂಧಿಸಿ 415 ಕೋಟಿ ರೂ. ನೀಡಲಾಗುತ್ತಿದೆ. ಮನೆಗೆ ನೀರು ನುಗ್ಗಿ ಸಮಸ್ಯೆಯಾದವರಿಗೆ ತಕ್ಷಣವೇ 10 ಸಾವಿರ ರೂ. ಬಿಡುಗಡೆ ಮಾಡಲಾಗುತ್ತಿದೆ. ಮೃತರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ನೀಡಲಾಗುತ್ತಿದೆ,'' ಎಂದರು.

**ಪರಿಹಾರ ಹೆಚ್ಚಳಕ್ಕೆ ಮನವಿ**

ಸಾಮಾನ್ಯ ಬೆಳೆಗೆ 6,800 ರೂ. ಬದಲು 20,000 ನೀಡಬೇಕು. ನೀರಾವರಿ ಜಮೀನಿಗೆ 13,500 ಬದಲು 35,000 ನೀಡಬೇಕು. ವಾಣಿಜ್ಯ ಬೆಳೆಗೆ 18,000 ಬದಲು 49,000 ರೂ. ಪರಿಹಾರ ಕೊಡಬೇಕೆಂದು ಕೇಂದ್ರಕ್ಕೆ ಮನವಿ ಮಾಡಲಾಗಿದೆ. ಕಳೆದ 7 ವರ್ಷಗಳಲ್ಲಿ ಮೋದಿ ಸರಕಾರವು ಕಾಂಗ್ರೆಸ್‌ನ 10 ವರ್ಷಗಳ ಅವಧಿಗಿಂತ ಮೂರು ಪಟ್ಟು ಹೆಚ್ಚು ಪರಿಹಾರ ನೀಡಿದೆ. ಅದಕ್ಕಾಗಿ ಕೇಂದ್ರಕ್ಕೆ ಅಭಿನಂದನೆ ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದ್ದಾರೆ.

**ಕಟ್ಟೆಚ್ಚರಕ್ಕೆ ಸೂಚನೆ**

ಶುಕ್ರವಾರ ಮತ್ತೊಂದು ಚಂಡಮಾರುತ ಬೀಸಲಿದೆ. ಇದರಿಂದ ನ.26-28ರ ವರೆಗೆ ಕಟ್ಟೆಚ್ಚರ ವಹಿಸಲು ಜಿಲ್ಲಾಡಳಿತಗಳಿಗೆ ಸೂಚಿಸಲಾಗಿದೆ ಎಂದು ಸಚಿವ ಅಶೋಕ್ ತಿಳಿಸಿದ್ದಾರೆ.

**900 ಕೋಟಿಗೆ ಮನವಿ:** ಬೆಳೆ ಹಾನಿಗೆ ಸಂಬಂಧಿಸಿ ಎನ್‌ಡಿಆರ್‌ಎಫ್‌ನಿಂದ 760 ಕೋಟಿ ರೂ. ನಿರೀಕ್ಷಿಸಿ ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆ. ಈಗ ಹೆಚ್ಚುವರಿಯಾಗಿ 900 ಕೋಟಿ ರೂ. ನೀಡುವಂತೆ ಪತ್ರ ಬರೆಯಲಾಗಿದೆ. ಕೇಂದ್ರ ಸರಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ ಎಂದು ಸಚಿವರು ಹೇಳಿದರು.

08-11-2021
Vk Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in